## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 205(168) |
| ಸದಸ್ಯರ ಹೆಸರು | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 16.07.2024 |
| ಉತ್ತರಿಸುವವರು | ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪೌರ ಕಾರ್ಮಿಕರ ಖಾಯಂಮಾತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು; ಕಳೆದ ಒಂದು ವರ್ಷದಲ್ಲಿ ಎಷ್ಟು ಪೌರಕಾರ್ಮಿಕರನ್ನು ಖಾಯಂಗೊಳಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ಸರ್ಕಾರದ ಅಧಿಸೂಚನೆ ದಿನಾಂಕ: 23.11.2022ರ ರೀತ್ಯಾ 5533 ಪೌರಕಾರ್ಮಿಕರ ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಆದೇಶಿಸಿರುವಂತೆ, ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪೌರ ಕಾರ್ಮಿಕರ ನೇಮಕಾತಿ ಪ್ರಕ್ರಿಯೆ ಕೈಗೊಂಡಿದ್ದು, ಈ ತಹಲ್ ವರೆವಿಗೂ ಖಾಯಂಗೊಳಿಸಲಾಗಿರುವ ಪೌರ ಕಾರ್ಮಿಕರ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ** ದಲ್ಲಿ ನೀಡಲಾಗಿದೆ. |
| (ಆ) | ಪ್ರಸ್ತುತ ಪೌರ ಕಾರ್ಮಿಕರನ್ನು ಯಾವ ಯಾವ ರೀತಿಯಲ್ಲಿ ನೇಮಕ ಮಾಡಲಾಗುತ್ತದೆ; ಅವರಿಗೆ ನೀಡುವ ವೇತನವೆಷ್ಟು; | ಸರ್ಕಾರದ ಆದೇಶ ಸಂಖ್ಯೆ: ನಅಇ 126 ಟಿಎಂಎಸ್ 2016, ದಿನಾಂಕ: 07.08.2017 ರನ್ವಯ ಸ್ವಚ್ಛತಾ ಕಾರ್ಯವನ್ನು ಹೊರಗುತ್ತಿಗೆಗೆ ನೀಡುವುದನ್ನು ಸ್ಥಗಿತಗೊಳಿಸಿ, ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಪೌರ ಕಾರ್ಮಿಕರನ್ನು ಅಗತ್ಯಕ್ಕೆ ಅನುಗುಣವಾಗಿ, ಪ್ರತಿ 700 ಜನಸಂಖ್ಯೆಗೆ ಒಬ್ಬ ಪೌರ ಕಾರ್ಮಿಕರಂತೆ (ಖಾಯಂ ಪೌರಕಾರ್ಮಿಕರನ್ನು ಒಳಗೊಂಡಂತೆ) ನೇರವಾಗಿ ಕೆಲಸಕ್ಕೆ ತೆಗೆದುಕೊಂಡು, ಸದರಿ ಪೌರ ಕಾರ್ಮಿಕರಿಗೆ ಸ್ಥಳೀಯ ಸಂಸ್ಥೆಗಳಿಂದ ಸಂಭಾವನೆಯನ್ನು ನೇರವಾಗಿ ಪಾವತಿಸುವಂತೆ ಆದೇಶಿಸಲಾಗಿರುತ್ತದೆ.<br><br>ಪ್ರಸ್ತುತ ಪೌರ ಕಾರ್ಮಿಕರಿಗೆ 2018ರ ಪರಿಷ್ಕೃತ ವೇತನ ಶ್ರೇಣಿಯನ್ವಯ ರೂ.17000-28950 ಗಳ ವೇತನ ನೀಡಲಾಗುತ್ತಿದೆ. |
| (ಇ) | ಪೌರ ಕಾರ್ಮಿಕರನ್ನು ಗುತ್ತಿಗೆ, ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿದಾಗ ಅವರ ಮೇಲೆ ಶೋಷಣೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಪೌರ ಕಾರ್ಮಿಕರ ಶೋಷಣೆ ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | |

ಇ-ಸಂಖ್ಯೆ: ನಅಇ 132 ಜಿಇಎಲ್ 2024 (ಇ)

**(ರಹೀಂಖಾನ್)**
ಪೌರಾಡಳಿತ ಮತ್ತು ಹಜ್ ಸಚಿವರು

ಅನುಬಂಧ – 1

ಅನುಬಂಧ-01

## ಖಾಯಂ ಪೌರಕಾರ್ಮಿಕರ ವಿವರ

| ಕ್ರ ಸಂ | ಜಿಲ್ಲೆಯ ಹೆಸರು | ಹಂಚಿಕೆ ಮಾಡಿದ ಹುದ್ದೆಗಳ ಸಂಖ್ಯೆ | ಹಂಚಿಕೆ ಮಾಡಿದ ಹುದ್ದೆಗಳಲ್ಲಿ ನೇಮಕಾತಿ ಆದೇಶ ನೀಡಿದ ಹುದ್ದೆಗಳ ಸಂಖ್ಯೆ | ನೇಮಕಾತಿ ಆದೇಶ ನೀಡಿದ ನಂತರ ಮತ್ತು ನೇಮಕಾತಿ ಪ್ರಕ್ರಿಯೆಯಲ್ಲಿರುವ ಹುದ್ದೆಗಳನ್ನು ಹೊರತುಪಡಿಸಿ ಖಾಲಿ ಉಳಿಯುವ ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|---|
| 1 | ಬೆಂಗಳೂರು ಗ್ರಾಮಾಂತರ | 129 | 72 | 57 | ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳ ರೀತ್ಯಾ ಸಾಮಾನ್ಯ ವರ್ಗ ಮತ್ತು ಇತರ ಹಿಂದುಳಿದ ವರ್ಗಗಳಿಗೆ ನಿಗಧಿಪಡಿಸಿರುವ ಸಮತಳ ಮೀಸಲಾತಿಯ ಹುದ್ದೆಗಳ ಅಭ್ಯರ್ಥಿಗಳು ಲಭ್ಯವಿಲ್ಲದೇ ಸದರಿ ಹುದ್ದೆಗಳು ಖಾಲಿ ಉಳಿದಿರುವುದರಿಂದ, ಈಗಾಗಲೇ ರಾಜ್ಯದ ಮಹಾನಗರ ಪಾಲಿಕೆಗಳಿಗೆ ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ನಅಇ 171 MNE 2022 (ಇ), ದಿ: 02.11.2023 ರ ಸರ್ಕಾರದ ಆದೇಶದಲ್ಲಿ ಸಮತಳ ಮೀಸಲಾತಿಯಲ್ಲಿ ವಿನಾಯಿತಿ ನೀಡಿರುವುದರಿಂದ ಅದರಂತೆ, ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಪೌರಕಾರ್ಮಿಕರ ವಿಶೇಷ ನೇರ ನೇಮಕಾತಿಯಲ್ಲಿ ಸಮತಳ ಮೀಸಲಾತಿಯಡಿ ನಿಗಧಿಪಡಿಸಿರುವ ಹುದ್ದೆಗಳ ಎದುರಾಗಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹರಿರುವ ಪೌರಕಾರ್ಮಿಕರನ್ನು ಪರಿಗಣಿಸಲು ಒಂದು ಬಾರಿ ವಿನಾಯಿತಿಯನ್ನು ನೀಡಬೇಕೆಂದು ಕೋರಿ ಸರ್ಕಾರಕ್ಕೆ ಪತ್ರ ಬರೆದು ಕೋರಲಾಗಿದೆ. |
| 2 | ಬೆಂಗಳೂರ ನಗರ | 435 | 166 | 269 | |
| 3 | ಚಿಕ್ಕಬಳ್ಳಾಪುರ | 102 | 70 | 32 | |
| 4 | ಚಿತ್ರದುರ್ಗ | 120 | 78 | 42 | |
| 5 | ದಾವಣಗೆರೆ | 66 | 46 | 20 | |
| 6 | ಕೋಲಾರ | 120 | 119 | 1 | |
| 7 | ರಾಮನಗರ | 141 | 107 | 34 | |
| 8 | ಶಿವಮೊಗ್ಗ | 161 | 85 | 76 | |
| 9 | ತುಮಕೂರು | 143 | 143 | 0 | |
| 10 | ಚಾಮರಾಜನಗರ | 44 | 43 | 1 | |
| 11 | ಚಿಕ್ಕಮಗಳೂರು | 97 | 58 | 39 | |
| 12 | ದಕ್ಷಿಣ ಕನ್ನಡ | 371 | 207 | 164 | |
| 13 | ಹಾಸನ | 172 | 172 | 0 | |
| 14 | ಕೊಡಗು | 27 | 17 | 10 | |
| 15 | ಮಂಡ್ಯ | 170 | 103 | 67 | |
| 16 | ಮೈಸೂರು | 330 | 282 | 48 | |
| 17 | ಉಡುಪಿ | 155 | 154 | 1 | |
| 18 | ಬಾಗಲಕೋಟೆ | 440 | 375 | 65 | |
| 19 | ಬೆಳಗಾವಿ | 0 | 238 | -238 | |
| 20 | ಧಾರವಾಡ | 37 | 19 | 18 | |
| 21 | ಗದಗ | 252 | 141 | 111 | |
| 22 | ಹಾವೇರಿ | 225 | 157 | 68 | |
| 23 | ಉತ್ತರ ಕನ್ನಡ | 259 | 174 | 85 | |
| 24 | ಬಳ್ಳಾರಿ | 221 | 58 | 163 | |
| 25 | ಬೀದರ | 258 | 258 | 0 | |
| 26 | ವಿಜಯಪುರ | 309 | 169 | 140 | |
| 27 | ಕಲಬುರಗಿ | 67 | 19 | 48 | |
| 28 | ಕೊಪ್ಪಳ | 212 | 161 | 51 | |
| 29 | ರಾಯಚೂರು | 210 | 181 | 29 | |
| 30 | ವಿಜಯನಗರ | 201 | 195 | 6 | |
| 31 | ಯಾದಗಿರಿ | 59 | 59 | 0 | |
| ಒಟ್ಟು | | 5533 | 4126 | 1407 | |